ದಿನಾಂಕ : DATE : 22/9/2020
ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

# ವಿಧೇಯಕಗಳ ಅನುಮೋದನೆಗೆ ಕಸರತ್ತು

ಉದಯ 22/9/20

## ಪ್ರಮುಖರ ಅನುಪಸ್ಥಿತಿ ನಿಭಾಯಿಸುವ ಸವಾಲು ■ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಸುವುದು ಅನುಮಾನ

ಬೆಂಗಳೂರು: ಕೋವಿಡ್-19ರ ಸಂದರ್ಭದಲ್ಲಿ ಸುರಕ್ಷತೆ ದೃಷ್ಟಿಯಿಂದ ವಿಧಾನಸಭೆಯ ಕಲಾಪ ಶನಿವಾರಕ್ಕೆ ಅಂತ್ಯವಾಗಲಿರುವ ಹಿನ್ನೆಲೆಯಲ್ಲಿ ಮಹತ್ವದ ಸುಗ್ರೀವಾಜ್ಞೆ, ವಿಧೇಯಕಗಳಿಗೆ ಅನುಮೋದನೆ ಪಡೆಯುವತ್ತ ಸರ್ಕಾರ ಗಮನ ಹರಿಸಲು ಮುಂದಾಗಿದೆ.

ಭೂ ಸುಧಾರಣೆ ಕಾಯ್ದೆ, ಎಪಿಎಂಸಿ ಕಾಯ್ದೆ, ಕಾರ್ಮಿಕ ಕಾಯ್ದೆ ತಿದ್ದುಪಡಿ ಸೇರಿ 19 ಸುಗ್ರೀವಾಜ್ಞೆಗಳು, ವಿಧೇಯಕಗಳಿಗೆ ಪ್ರಸ್ತುತ ಅಧಿವೇಶನದಲ್ಲೇ ಅನುಮೋದನೆ ಪಡೆಯಲು ಸರ್ಕಾರ ನಿರ್ಧರಿಸಿದೆ. ಕಲಾಪದಲ್ಲಿ 67 ಬಿಜೆಪಿ ಶಾಸಕರು ಹಾಜರಾಗಿದ್ದರು. ಸಚಿವರನ್ನು ಹೊರತುಪಡಿಸಿ ಕೋವಿಡ್- 19ರ ಕಾರಣಕ್ಕೆ 6 ಮಂದಿ ಗೈರಾಗಿದ್ದರು. ಹಾಗಾಗಿ ಬಾಕಿ ಶಾಸಕರು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡು ಸುರಕ್ಷತೆಗೆ ಒತ್ತು ನೀಡಿ ಕಲಾಪದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಸರ್ಕಾರ ಸೂಚಿಸಿದೆ.

ಸೆ. 30ಕ್ಕೆ ಮುಕ್ತಾಯವಾಗಬೇಕಿದ್ದ ಕಲಾಪವನ್ನು ಸುರಕ್ಷತೆ ದೃಷ್ಟಿಯಿಂದ ಸೆ. 26ಕ್ಕೆ ಮೊಟಕುಗೊಳಿಸಲು ವಿಧಾನಸಭೆ ಕಲಾಪ ಸಲಹಾ ಸಮಿತಿಯಲ್ಲಿ ನಿರ್ಧರಿಸಲಾಗಿದೆ. ಮೊಟಕುಗೊಂಡ ಅವಧಿಗೆ ಹೊಂದಾಣಿಕೆಗಾಗಿ ಮಂಗಳವಾರದಿಂದ ಶನಿವಾರದವರೆಗೆ ಬೆಳಗ್ಗೆ 10ರಿಂದ ಸಂಜೆ 7ರವರೆಗೆ ಸದನ ನಡೆಸಲು ನಿರ್ಧರಿಸಲಾಗಿದೆ. ಹಾಗಾಗಿ ಐದು ದಿನದ ಕಲಾಪದಲ್ಲೇ ಎಲ್ಲ ಸುಗ್ರೀವಾಜ್ಞೆ, ವಿಧೇಯಕಗಳಿಗೆ ಒಪ್ಪಿಗೆ ಪಡೆಯಲು ಸರ್ಕಾರ ಸಿದ್ಧತೆ ನಡೆಸಿದೆ.



**"ಆರೋಗ್ಯ ಸುರಕ್ಷತೆ ದೃಷ್ಟಿಯಿಂದ ವಿಧಾನಸಭೆಯ ಕಲಾಪ 2 ದಿನ ಮೊಟಕುಗೊಂಡಿದೆ. ಆದರೆ ಕಲಾಪ ನಿತ್ಯ ಬೆಳಗ್ಗೆ 11ರ ಬದಲಿಗೆ 10 ಗಂಟೆಗೆ ಆರಂಭವಾಗಲಿದ್ದು, ಸಂಜೆ 6ರ ಬದಲಿಗೆ 7 ಗಂಟೆಗೆ ಮುಕ್ತಾಯವಾಗಲಿದೆ. ಆ ಮೂಲಕ ನಿತ್ಯ ಎರಡು ಗಂಟೆ ಹೆಚ್ಚುವರಿ ಅವಧಿಗೆ ಕಲಾಪ ನಡೆಯಲಿದ್ದು, ಶನಿವಾರ ಕೂಡ ಪೂರ್ಣ ದಿನ ಕಲಾಪವಿರಲಿದೆ. ಪ್ರಶ್ನೋತ್ತರ ಕಲಾಪವಿಲ್ಲದ ಕಾರಣ ವಿಧೇಯಕ ಸೇರಿ ಇತರೆ ಚರ್ಚೆಗೆ ಹೆಚ್ಚಿನ ಅವಕಾಶ ಸಿಗಲಿದೆ. ಪ್ರತಿಪಕ್ಷಗಳ ಎಲ್ಲ ಪ್ರಶ್ನೆ, ಆಕ್ಷೇಪಣೆಗಳಿಗೆ ಸೂಕ್ತ ಉತ್ತರ ನೀಡಲು ಸರ್ಕಾರ ಸಿದ್ಧವಿದೆ.**

**• ವಿ. ಸುನೀಲ್ ಕುಮಾರ್, ಸರ್ಕಾರದ ಮುಖ್ಯ ಸಚೇತಕ**



**ಶಾಸಕಾಂಗ ಪಕ್ಷದ ಸಭೆ ಇಲ್ಲ?:** ಕೋವಿಡ್- 19ರ ಹಿನ್ನೆಲೆಯಲ್ಲಿ ನೂರಾರು ಶಾಸಕರು ಸಭೆ ಸೇರಿ ಚರ್ಚಿಸುವುದು ಸುರಕ್ಷಿತವಲ್ಲ ಎಂಬ ಕಾರಣಕ್ಕೆ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಸುವುದೇ ಅನುಮಾನದಂತಿದೆ. ಅಗತ್ಯವೆನಿಸಿದರೆ ವಿಡಿಯೋ ಸಂವಾದದ ಮೂಲಕ ಚರ್ಚಿಸುವ ಬಗ್ಗೆ ಪಕ್ಷ ಚಿಂತಿಸಿದೆ. ಹಾಗೆಯೇ ಪ್ರಮುಖ ವಿಧೇಯಕಗಳಿಗೆ ಅನುಮೋದನೆ ಪಡೆಯುವ ಸಂದರ್ಭದಲ್ಲಿ ಸದನದಲ್ಲಿ ಅಗತ್ಯ ಸಂಖ್ಯಾಬಲವಿರುವಂತೆ ವಿಶೇಷ ಗಮನ ಹರಿಸಲು ಸರ್ಕಾರ ಚಿಂತಿಸಿದೆ. ಆ ಮೂಲಕ ಮಂಡನೆಯಾಗುವ ಎಲ್ಲ ವಿಧೇಯಕಗಳಿಗೆ ಒಪ್ಪಿಗೆ ಪಡೆಯುವುದು ಸರ್ಕಾರದ ಲೆಕ್ಕಾಚಾರ.

ಅಧಿವೇಶನ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಯಬೇಕು. ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ಅನುದಾನ, ಸರ್ಕಾರದ ಮಟ್ಟದಲ್ಲಿ ಆಗಬೇಕಾದ ಕೆಲಸ ಕಾರ್ಯಗಳು, ಜಿಲ್ಲಾ ಉಸ್ತುವಾರಿ ಸಚಿವರಿಂದ ನಿರೀಕ್ಷಿತ ಸ್ಪಂದನೆ ಸಿಗುತ್ತಿಲ್ಲ ಎಂಬ ಬಗ್ಗೆ ಹಿರಿಯ ನಾಯಕರ ಗಮನಕ್ಕೆ ತರಬೇಕು ಎಂಬುದು ಬಿಜೆಪಿ ಶಾಸಕರ ಆಶಯ. ಆದರೆ ಸುರಕ್ಷತೆ ಕಾರಣಕ್ಕೆ ಶಾಸಕಾಂಗ ಪಕ್ಷದ ಸಭೆ ನಡೆಸದಿರುವುದಕ್ಕೆ ಶಾಸಕರಲ್ಲಿ ತೀವ್ರ ಅಸಮಾಧಾನವಿದ್ದು, ಸರ್ಕಾರದ ಪ್ರಮುಖರು ತಲೆನೋವಾಗಿ ಪರಿಣಮಿಸಿದಂತಿದೆ.

ಪ್ರಮುಖರ ಅನುಪಸ್ಥಿತಿ ನಿಭಾಯಿಸುವ ಸವಾಲು: ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ, ಗೃಹ ಸಚಿವ ಬಸವರಾಜ ಬೊಮ್ಮಾಯಿ, ಸಚಿವರಾದ ಕೆ.ಗೋಪಾಲಯ್ಯ, ಬೈರತಿ ಬಸವರಾಜು, ಶಶಿಕಲಾ ಜೊಲ್ಲೆ ಅವರಿಗೆ ಕೋವಿಡ್- 19 ಕಾಣಿಸಿಕೊಂಡಿದೆ. ಇದೇ ಕಾರಣಕ್ಕೆ ಪ್ರಶ್ನೋತ್ತರ ಕಲಾಪದ ಬದಲಿಗೆ ಸದನದಲ್ಲಿ ಮಂಡನೆಗಷ್ಟೇ ಸೀಮಿತಗೊಳಿಸಲು ಕಲಾಪ ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿದೆ. ಪ್ರಮುಖರ ಅನುಪಸ್ಥಿತಿಯಲ್ಲೇ ಸಂದರ್ಭಾನುಸಾರ ಪ್ರತಿಪಕ್ಷಗಳ ಆರೋಪ, ಟೀಕೆಗಳಿಗೆ ತಕ್ಕ ಪ್ರತ್ಯುತ್ತರ ನೀಡುವ ರೀತಿಯಲ್ಲಿ ಉಭಯ ಸದನಗಳಲ್ಲೂ ಸಚಿವರು ಸಜ್ಜಾಗಿದ್ದಾರೆ ಎಂದು ಮೂಲಗಳು ಹೇಳಿವೆ.